**Crl.M.C. 825/2025**
**PW-1**

**ಸಾಕ್ಷಿಯನ್ನು ದಿನಾಂಕ**: 03-02-2026 **ರಂದು ಕರೆಯಿಸಿ, ಅವರಿಗೆ ಪ್ರಮಾಣ ವಚನ ಮಾಡಿಸಲಾಯಿತು**.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ. ಸಿ. ಬಿ ವಕೀಲರಿಂದ**-

ನಾನು ನನ್ನ ಮುಖ್ಯ ವಿಚಾರಣೆಗಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು, ಸದರಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿ ಬರೆಯಿಸಿದ್ದು ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ನನಗೆ ಗೊತ್ತು ಮತ್ತು ಅದರಲ್ಲಿರುವ ಸಹಿಗಳು ನನ್ನದಾಗಿವೆ.

ನನ್ನ ಮತ್ತು ಎದುರುದಾರನ ಮದುವೆಯ ಕರೆಯೋಲೆ ಹಾಜರುಪಡಿಸಿದ್ದು ಅದನ್ನು ನಿಪಿಃ 1 ಎಂದು, ಆಧಾರ್ ಕಾರ್ಡ್ ಅನ್ನು ಹಾಜರುಪಡಿಸಿದ್ದು, ಮೂಲ ಪ್ರತಿಯನ್ನು ನೋಟರಿ ಪ್ರತಿಯೊಂದಿಗೆ ತಾಳೆ ಮಾಡಿ ನೋಡಿ ಸರಿ ಇದ್ದುದ್ದರಿಂದ ನೋಟರಿ ಪ್ರತಿಯನ್ನು ನಿಪಿಃ 2 ಎಂದು ಗುರುತಿಸಲಾಯಿತು. ಎದುರುದಾರ ನನಗೆ ನೀಡಿರುವ ನೋಟಿಸ್ ನ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿಃ 3 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ**

ಎದುರುದಾರ ಗೈರು ಹಾಜರಿದ್ದು, ಪಾಟೀಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.